**ಕರ್ನಾಟಕ ರಾಜ್ಯ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ನಿರ್ದೇಶಕರ ಕಛೇರಿ, ನಂ.17, ಜಯನಿವಾಸ, ಶಂಕರಮಠ ರಸ್ತೆ, ಬಸವನಗುಡಿ, ಬೆಂಗಳೂರು – 560 004.**

ಸಂಖ್ಯೆ: ಲೆಕ್ಕ/ಪೇ–ಬಿಲ್ಲು/ಆ.ತೆ/102/2023–24 ದಿನಾಂಕ:25.10.2023

**ಅಧಿಕೃತ ಜ್ಞಾಪನಾ**

ವಿಷಯ: 2023–24ನೇ ಆರ್ಥಿಕ ವರ್ಷದಲ್ಲಿ ಸರ್ಕಾರಿ ನೌಕರರು ವೇತನದ ಆದಾಯದ ಮೇಲೆ ಪಾವತಿಸಬೇಕಾಗುವ ತೆರಿಗೆಯನ್ನು ವೇತನ ಆದಾಯ ಮೂಲದಿಂದ ವಸೂಲು ಮಾಡುವ ಬಗ್ಗೆ ಸೂಚನೆಗಳು

******

1. ದಿನಾಂಕ: 01–04–2020ರಿಂದ ಅನ್ವಯವಾಗುವಂತೆ ವರಮಾನ ತೆರಿಗೆ ಕಾಯಿದೆ ಕಲಂ 115BAC ರಡಿ ಆದಾಯ ತೆರಿಗೆ ದರದಲ್ಲಿ ರಿಯಾಯತಿ ನೀಡಿ ಹೊಸ ತೆರಿಗೆ ವಿಧಾನವನ್ನು ಜಾರಿಗೆ ತರಲಾಗಿರುತ್ತದೆ. ಅದರಂತೆ 2020–21 ನೇ ಆರ್ಥಿಕ ವರ್ಷದಿಂದ ಎರಡು ತೆರಿಗೆ ವಿಧಾನಗಳು ಜಾರಿಯಲ್ಲಿರುತ್ತದೆ. ಒಂದು ನಿಯಮಾನುಸಾರ ಅನ್ವಯವಾಗುವ ಕಡಿತ ಮತ್ತು ವಿನಾಯಿತಿಗಳನ್ನು ಮತ್ತು Finance Act 2020 ರಲ್ಲಿ ವಿಧಿಸಲಾಗಿರುವ ತೆರಿಗೆ ದರಗಳನ್ನು ಒಳಗೊಂಡ ಹಳೆ ಆದಾಯ ತರಿಗೆ ವಿಧಾನ. ಎರಡನೆಯ ವಿಧಾನ ಕಾಯಿದೆ ಕಲಂ 115BAC ರಡಿ ನಿರ್ದಿಷ್ಟ ಕಡಿತ ಮತ್ತು ವಿನಾಯಿತಿಗಳನ್ನು ಕೈ ಬಿಟ್ಟು ವಿಧಿಸಲಾಗಿರುವ ಹೊಸ ತೆರಿಗೆ ದರ.

2. 2023–24 ನೇ ಆರ್ಥಿಕ ವರ್ಷದಿಂದ ವರಮಾನ ತೆರಿಗೆ ಕಾಯಿದೆ ಕಲಂ 115BACರಡಿ ಉಪನಿಯಮ (1A) ಸೇರಿಸಲಾಗಿದ್ದು ಅದರನ್ವಯ ಹೊಸ ತೆರಿಗೆ ವಿಧಾನ ಪೂರ್ವ ನಿಯೋಜಿತ (DEFAULT) ಆದಾಯ ತೆರಿಗೆ ವಿದಾನವಾಗಿರುತ್ತದೆ ಹಾಗೂ ಇಚ್ಚಿಸಿದಲ್ಲಿ ಹಳೆ ಆದಾಯ ತರಿಗೆ ವಿಧಾನವನ್ನು ಆಯ್ಕೆ ಮಾಡಿಕೊಳ್ಳಲು ವರಮಾನ ತೆರಿಗೆ ಕಾಯಿದೆ ಕಲಂ 115BAC(6) ರಲ್ಲಿ ಅವಕಾಶ ಕಲ್ಪಿಸಲಾಗಿದೆ. ಆದಾಯ ತೆರಿಗೆ ಕಕ್ಷೆಗೆ ಒಳಪಡುವ ಎಲ್ಲಾ ಸರ್ಕಾರಿ ನೌಕರರು ಹಳೆ ಆದಾಯ ತೆರಿಗೆ ದರ ವಿಧಾನವನ್ನು ಆಯ್ಕೆ ಮಾಡಿ ಕೊಳ್ಳಲು ಇಚ್ಚಿಸಿದಲ್ಲಿ ಲಿಖಿತವಾಗಿ ಅವರ ವೇತನ ತೆಗೆಯುವ ಹಾಗು ವಿತರಿಸುವ ಅಧಿಕಾರಿಗಳಿಗೆ ದಿನಾಂಕ: 20–11–2023 ರೊಳಗೆ ನೀಡತಕ್ಕದ್ದು. ಆದಾಯದ ಮೇಲೆ ಪಾವತಿಸಬೇಕಾಗುವ ಹಳೇ ಮತ್ತು ಹೊಸ ಆದಾಯ ತೆರಿಗೆ ದರ ಹಾಗೂ ಇತರೆ ಅವಶ್ಯಕ ವಿವರಗಳನ್ನು ಅನುಬಂಧ–III ರಲ್ಲಿ ನೀಡಿದೆ.

3. ಕಾಯಿದೆ ಕಲಂ 115BAC ರಡಿ ವಿಧಿಸಲಾಗಿರುವ ಹೊಸ ಆದಾಯ ತೆರಿಗೆ ದರ ವಿಧಾನವನ್ನು ಆಯ್ಕೆ ಮಾಡಿಕೊಂಡಿರುವ ನೌಕರರಿಗೆ ಈ ಕೆಳಕಂಡ ಕಡಿತ ಮತ್ತು ವಿನಾಯಿತಿಗಳು ಅನ್ವಯವಾಗುವುದಿಲ್ಲ.

- ವೃತ್ತಿ ತೆರಿಗೆ
- ಮನೆ ಬಾಡಿಗೆ ಭತ್ಯೆ
- ಇತರೆ ವಿಶೇಶ ಭತ್ಯೆಗಳು [ಕಲಂ10(14)]
- ಸ್ವಂತ ವಾಸಕ್ಕಾಗಿ ಮನೆ ಕಟ್ಟಲು / ಖರೀದಿಸಲು ತೆಗೆದುಕೊಂಡ ಸಾಲದ ಮೇಲಿನ ಬಡ್ಡಿ [ಕಲಂ24]
- ಚ್ಯಾಪ್ಟರ್ VI A ವಿನಾಯಿತಿಗಳು [ಕಲಂ 80CCD(2) ಮತ್ತು 80JJAA ಹೊರತು ಪಡಿಸಿ]

**2023–24 ನೇ ಆರ್ಥಿಕ ವರ್ಷದಿಂದ ಸ್ಟಾಂಡರ್ಡ್ ಡಿಡಕ್ಷನ್ ಸೌಲಭ್ಯ ಹೊಸ ಆದಾಯ ತೆರಿಗೆ ದರ ವಿಧಾನಕ್ಕೆ ವಿಸ್ತರಿಸಲಾಗಿದೆ.**

(ಸ್ಟಾಂಡರ್ಡ್ ಡಿಡಕ್ಷನ್ ಆದಾಯದ ಮೇಲೆ ಪಾವತಿಸಬೇಕಾಗುವ ಆದಾಯ ತೆರಿಗೆ ದರ ಹಾಗೂ ಇತರೆ ಅವಶ್ಯಕ ವಿವರಗಳನ್ನು ಅನುಬಂಧ–III ರಲ್ಲಿ ನೀಡಿದೆ)

4. ಹಳೆ ಆದಾಯ ತೆರಿಗೆ ವಿಧಾನದಲ್ಲಿ ಮುಂದುವರೆಯಲು ಇಚ್ಛಿಸುವ ನೌಕರರು ಅವರ ಉಳಿತಾಯದ ಮಾಹಿತಿಗಳನ್ನು (ವೇತನದಿಂದ ಆಗುವ ಕಡಿತಗಳನ್ನು ಹೊರತು ಪಡಿಸಿ) ನಮೂನೆ 12BB ರಲ್ಲಿ ಅಗತ್ಯ ದಾಖಲೆಗಳೊಂದಿಗೆ ನೀಡ ತಕ್ಕದ್ದು.

i. ಕಲಂ 80CCEರನ್ವಯ ಪ್ರಸ್ತುತ ಕಲಂ 80C, 80CCC, 80CCD(1) ಈ ಮೂರನ್ನು ಸೇರಿಸಿ ತೊಡಗಿಸಬಹುದಾದ ಮೊತ್ತದ ಗರಿಷ್ಠ ಮಿತಿ ರೂ.1.50 ಲಕ್ಷ ಅಂದರೆ ಆರ್ಥಿಕ ವರ್ಷದಲ್ಲಿ ಮಾಡಬಹುದಾದ ಎಲ್ಲಾ ರೀತಿಯ ಉಳಿತಾಯ, ಟ್ಯೂಷನ್ ಫೀ ಹಾಗೂ ಮನೆ ಕಟ್ಟುವ ಸಾಲದ ಅಸಲು ಮರುಪಾವತಿ, ಬ್ಯಾಂಕು ಠೇವಣಿ, ಸುಕನ್ಯಾ ಸಮೃದ್ಧಿ ಯೋಜನೆ, ಎಲ್.ಐ.ಸಿ ಈ ಎಲ್ಲಾ ಮೊತ್ತ ಸೇರಿ ಗರಿಷ್ಠ ರೂ.1.50ಲಕ್ಷಕ್ಕೆ ಮೀರಬಾರದು ಎಂಬುದನ್ನು ತಿಳಿಸಿದೆ.

ii. 2021-22 ನೇ ಆರ್ಥಿಕ ವರ್ಷದಿಂದ ಸಾಮಾನ್ಯ ಭವಿಷ್ಯ ನಿಧಿ ಖಾತೆಯಲ್ಲಿ ರೂ.5.00 ಲಕ್ಷಕ್ಕು ಮೀರಿ ತೊಡಗಿಸಿದ ಮೊತ್ತವನ್ನು Taxable Contribution ಎಂದು ಪರಿಗಣಿಸಲಾಗುವುದು ಹಾಗೂ ಸದರಿ ಮೊತ್ತದ ಮೇಲಿನ ಬಡ್ಡಿಯನ್ನು ಆದಾಯಕರ ವರಮಾನ (Taxable Interest) ಎಂದು ಪರಿಗಣಿಸಲಾಗುವುದು.

iii. ವೇತನದಿಂದ ಕಟಾಯಿಸದೇ ಇರುವ ಹೂಡಿಕೆಗಳಿಗೆ / ಟ್ಯೂಷನ್ ಫೀ / ಮನೆ ಕಟ್ಟುವ ಸಾಲದ ಅಸಲು ಮತ್ತು ಬಡ್ಡಿ ಇತ್ಯಾದಿಗಳಿಗೆ ವಿನಾಯ್ತಿಗೆ ಪರಿಗಣಿಸಲು ಮಾಹಿತಿಯನ್ನು ನಮೂನೆ 12BB ರಲ್ಲಿ ಪ್ರತ್ಯೇಕ, ಒಪ್ಪಬಹುದಾದ ದಾಖಲೆಗಳೊಂದಿಗೆ ಒದಗಿಸತಕ್ಕದ್ದು. ಸರಿಯಾದ ದಾಖಲಾತಿ ಒದಗಿಸದೇ ಇದ್ದಲ್ಲಿ ತೆರಿಗೆ ವಿನಾಯ್ತಿ ನೀಡತಕ್ಕದ್ದಲ್ಲ. ದಾಖಲಾತಿ ಪಡೆಯದೆ, ಸರಿಯಾಗಿ ಪರಿಶೀಲಿಸದೆ ತೆರಿಗೆ ವಿನಾಯ್ತಿ ನೀಡಿದ್ದಲ್ಲಿ, ಸಂಬಂಧಪಟ್ಟ ಅಧಿಕಾರಿಗಳು/ಸಿಬ್ಬಂದಿಯವರು ವೈಯಕ್ತಿಕವಾಗಿ ಹೊಣೆಗಾರರಾಗುತ್ತಾರೆ.

iv. ಆದಾಯ ತೆರಿಗೆ ಕಲಂ 80CCC ರನ್ವಯ ಎಲ್.ಐ.ಸಿ ಅಥವಾ ಇತರೆ ವಿಮಾದರರ ನಿರ್ದಿಷ್ಟ ಪೆನ್ಷನ್ ಸ್ಕೀಂನಲ್ಲಿ ತೊಡಗಿಸಿದ ಮೊತ್ತಕ್ಕೆ ಗರಿಷ್ಟ ರೂ.1,50,000/-ವರೆಗೆ ವಿನಾಯ್ತಿ ನೀಡಿದೆ.

v. ಆದಾಯ ತೆರಿಗೆ ಕಲಂ 80CCD(1) ರನ್ವಯ ನ್ಯಾಷನಲ್ ಪೆನ್ಷನ್ ಸ್ಕೀಂನಲ್ಲಿ ತೊಡಗಿಸಿದ ಮೊತ್ತಕ್ಕೆ ವೇತನದ ಶೇ 10 ರಷ್ಟು ಮೊತ್ತ ವಿನಾಯ್ತಿ ನೀಡಿದೆ.

vi. ಆದಾಯ ತೆರಿಗೆ ಕಲಂ 80CCD(1B) ರನ್ವಯ ನ್ಯಾಷನಲ್ ಪೆನ್ಷನ್ ಸ್ಕೀಂನಲ್ಲಿ **(VoluntaryContribution)** ತೊಡಗಿಸಿದ ಹೆಚ್ಚುವರಿ ಮೊತ್ತ ರೂ.50000/-ವರೆಗೆ ವಿನಾಯ್ತಿ ನೀಡಿದೆ . **ಈ ಹೆಚ್ಚುವರಿ ಮೊತ್ತ ಕಲಂ 80CCD(1) ರಡಿ ಪರಿಗಣಿಸಲಾಗುವ ಮೊತ್ತ ಅಂದರೆ ವೇತನದ ಶೇ 10 ರಷ್ಟು ಮಿತಿಗೆ ಒಳಪಟ್ಟಿರುವ ಮೊತ್ತವಾಗಿರಬಾರದು.** ಈ ವಿನಾಯ್ತಿ ಕಲಂ 80CCE ರಡಿ ನೀಡಲಾಗಿರುವ ಗರಿಷ್ಠ ಮಿತಿ ರೂ.1.50 ಲಕ್ಷ ಕ್ಕೆ ಒಳಪಡುವುದಿಲ್ಲ.

vii. ಆದಾಯ ತೆರಿಗೆ ಕಲಂ 80CCD(2) ರನ್ವಯ ನ್ಯಾಷನಲ್ ಪೆನ್ಷನ್ ಸ್ಕೀಂನಲ್ಲಿ ಸರ್ಕಾರದ ವತಿಯಿಂದ ನೀಡಲಾಗುವ ಅಂಶದಾನಕ್ಕೆ (ವೇತನದ ಶೇ 10 ರಷ್ಟು ಮೊತ್ತಕ್ಕೆ ಮೀರದಂತೆ) ವಿನಾಯ್ತಿ ನೀಡಿದೆ. ಈ ವಿನಾಯ್ತಿ ಕಲಂ 80CCE ರಡಿ ನೀಡಲಾಗಿರುವ ಗರಿಷ್ಠ ಮಿತಿ ರೂ.1.50 ಲಕ್ಷ ಕ್ಕೆ ಒಳಪಡುವುದಿಲ್ಲ. **(ಸರ್ಕಾರದ ವತಿಯಿಂದ ನ್ಯಾಷನಲ್ ಪೆನ್ಷನ್ ಸ್ಕೀಂಗೆ ನೀಡಲಾಗಿರುವ ಅಂಶದಾನವನ್ನು ನೌಕರರ ಒಟ್ಟು ವೇತನ ಲೆಕ್ಕಾಚಾರಕ್ಕೆ ಸೇರಿಸಿರಬೇಕು).**

viii. ಆದಾಯ ತೆರಿಗೆ ಕಲಂ 80G ರನ್ವಯ ಚಾರಿಟೆಬಲ್ ಸಂಸ್ಥೆಗಳಿಗೆ ಡೊನೇಷನ್ ನೀಡಿ ವಿನಾಯಿತಿ ಕ್ಲೈಮು ಮಾಡುವ ಪ್ರಕರಣಗಳಲ್ಲಿ ಇಂತಹ ಡೊನೇಷನ್ ಆದಾಯ ತೆರಿಗೆ ಕಾಯ್ದೆಯಡಿ ವಿನಾಯಿತಿಗೆ ಅರ್ಹತೆ ಪಡೆದಿರುವ ಬಗ್ಗೆ ಆದಾಯ ತೆರಿಗೆ ಇಲಾಖೆಯ ದೃಢೀಕರಣ ಪಡೆದ ನಂತರವೇ ವಿನಾಯ್ತಿ ನೀಡಬೇಕಾಗಿರುತ್ತದೆ. ಹಾಗೂ ರೂ. 2,000/-ಕ್ಕಿಂತ ಹೆಚ್ಚಿನ ಡೊನೇಷನ್‌ಗಳು ಚೆಕ್ ಅಥವಾ ಇತರೆ ಮೂಲಗಳಿಂದ ಪಾವತಿಯಾಗಿರಬೇಕು. ಸ್ವಚ್ಛ ಭಾರತ ಅಭಿಯಾನಕ್ಕೆ ವಂತಿಕೆ ನೀಡುವ ಮೊತ್ತಕ್ಕೆ ಕಲಂ 80G ರಡಿಯಲ್ಲಿ ಈ ಮೊತ್ತಕ್ಕೆ ಶೇ.100ರಷ್ಟು ವಿನಾಯಿತಿ ಲಭ್ಯವಿದೆ (ದಾಖಲೆಗಳನ್ನು ಒದಗಿಸುವುದು).

ix. ಆದಾಯ ತೆರಿಗೆ ಕಲಂ 24 ರಡಿ ಸ್ವಂತ ವಾಸಕ್ಕಾಗಿ ಮನೆ ಕಟ್ಟಲು / ಖರೀದಿಸಲು ತೆಗೆದುಕೊಂಡ ಸಾಲದ ಮೇಲಿನ ಬಡ್ಡಿ – ದಿನಾಂಕ:31-03-1999ರೊಳಗೆ ಸಾಲ ಪಡೆದಿದ್ದಲ್ಲಿ ಗರಿಷ್ಟ ರೂ.30,000/-ಗಳು, ದಿನಾಂಕ:01-04-1999ರ ನಂತರ ಪಡೆದಲ್ಲಿ ಗರಿಷ್ಟ ರೂ.2,00,000/- ಹಾಗೂ ಸದರಿ ಮನೆ ಕಟ್ಟುವ / ಕೊಳ್ಳುವ ಕಾರ್ಯವು ಸಾಲ ಪಡೆದ ಆರ್ಥಿಕ ವರ್ಷದಿಂದ ಮೂರು ವರ್ಷಗಳ ಒಳಗೆ ಮುಗಿದಿದ್ದಲ್ಲಿ (2017-18 ಆರ್ಥಿಕ ವರ್ಷದಿಂದ ಸಾಲ ಪಡೆದ 5 ವರ್ಷಗಳ ಒಳಗೆ) ವಿನಾಯಿತಿ ನೀಡತಕ್ಕದ್ದು.

**ಫಾರಂ 12C ರಲ್ಲಿ ಮಾಹಿತಿ ನೀಡುವುದು.**

x. ಆದಾಯ ತೆರಿಗೆ ಕಲಂ 24 ರಡಿ ನೀಡ ಬಹುದಾದ ವಿನಾಯ್ತಿಯೊಂದಿಗೆ ಈ ಕೆಳಕಂಡ ವಿನಾಯ್ತಿ ಅನ್ವಯವಾಗುತ್ತದೆ.

a. ಆದಾಯ ತೆರಿಗೆ ಕಲಂ 80EE ರಡಿ ಸ್ವಂತ ವಾಸಕ್ಕಾಗಿ ಖರೀದಿಸಲು ತೆಗೆದುಕೊಂಡ ಸಾಲದ ಮೇಲಿನ ಬಡ್ಡಿ ಗರಿಷ್ಟ ರೂ.50,000/-ಗಳ ವಿನಾಯ್ತಿ ಈ ಕೆಳಕಂಡ ಷರತ್ತಿಗೊಳಪಟ್ಟು ಅನ್ವಯವಾಗುತ್ತದೆ.

- ಆರ್ಥಿಕ ವರ್ಷ 2016-17 ರಲ್ಲಿ ಸಾಲ ಮಂಜೂರಾಗಿರ ತಕ್ಕದ್ದು.
- ಮಂಜೂರಾಗಿರುವ ಸಾಲದ ಮೊತ್ತ ಮೂವತ್ತೈದು ಲಕ್ಷಗಳ ರೂಪಾಯಿಗಳನ್ನು ಮೀರತಕ್ಕದಲ್ಲ.
- ಮನೆಯ ಮೌಲ್ಯ ಐವತ್ತು ಲಕ್ಷ ರೂಪಾಯಿಗಳನ್ನು ಮೀರತಕ್ಕದಲ್ಲ.
- ಸಾಲ ಮಂಜೂರಾಗಿರುವ ದಿನಾಂಕಕ್ಕೆ ನೌಕರರು ಇನ್ನಾವುದೇ ಸ್ವಂತ ಮನೆ ಹೊಂದಿರ ತಕ್ಕದ್ದಲ್ಲ.

b. ಆದಾಯ ತೆರಿಗೆ ಕಲಂ 80EEA ರಡಿ ಸ್ವಂತ ವಾಸಕ್ಕಾಗಿ ಖರೀದಿಸಲು 2019-20 2020-21 ಅಥವ 2021-22 ಆರ್ಥಿಕ ವರ್ಷದಲ್ಲಿ ತೆಗೆದುಕೊಂಡ ಸಾಲದ ಮೇಲಿನ ಬಡ್ಡಿ ಗರಿಷ್ಟ ರೂ.1,50,000/-ಗಳ ವಿನಾಯ್ತಿ ಈ ಕೆಳಕಂಡ ಷರತ್ತಿಗೊಳಪಟ್ಟು ಅನ್ವಯವಾಗುತ್ತದೆ.

- ಮಂಜೂರಾಗಿರುವ ಸಾಲದ ಮೊತ್ತ ಮೂವತ್ತೈದು ಲಕ್ಷ ರೂಪಾಯಿಗಳನ್ನು ಮೀರತಕ್ಕದಲ್ಲ.
- ಮನೆಯ ಮೌಲ್ಯ ನಲವತ್ತೈದು ಲಕ್ಷಗಳ ರೂಪಾಯಿಗಳನ್ನು ಮೀರತಕ್ಕದಲ್ಲ.
- ಸಾಲ ಮಂಜೂರಾಗಿರುವ ದಿನಾಂಕಕ್ಕೆ ನೌಕರರು ಇನ್ನಾವುದೇ ಸ್ವಂತ ಮನೆ ಹೊಂದಿರ ತಕ್ಕದ್ದಲ್ಲ.
- ಆದಾಯ ತೆರಿಗೆ ಕಲಂ 80EE ರಡಿ ಯಾವುದೇ ವಿನಾಯ್ತಿ ಪಡೆದಿರತಕ್ಕದ್ದು.

xi. ಆದಾಯ ತೆರಿಗೆ ಕಲಂ 80EEBರಡಿ ವಿದ್ಯುತ್ ವಾಹನ (Electric Vehicle) ಖರೀದಿಸಲು ತೆಗೆದುಕೊಂಡ ಸಾಲದ ಮೇಲಿನ ಬಡ್ಡಿ ಗರಿಷ್ಟ ರೂ.1,50,000/-ಗಳ ವಿನಾಯ್ತಿ ಅನ್ವಯವಾಗುತ್ತದೆ.

xii. ತೆರಿಗೆ ವಿನಾಯಿತಿಗಳನ್ನು ನೀಡುವಲ್ಲಿ ಆದಾಯ ತೆರಿಗೆ ನಿಯಮಗಳಲ್ಲಿ ನಿಗದಿಪಡಿಸಿರುವ ಷರತ್ತುಗಳು ಅನುಪಾಲನೆಯಾಗಿದೆಯೇ ಎಂಬುದನ್ನು ಪರಿಶೀಲಿಸಿ ಖಚಿತ ಪಡಿಸಿಕೊಂಡ ನಂತರವಷ್ಟೇ ತೆರಿಗೆ ವಿನಾಯ್ತಿ ನೀಡಬಹುದಾಗಿದೆ.

4. ಆದಾಯ ತೆರಿಗೆ ಕಕ್ಷೆಗೆ ಒಳಪಡುವ ಎಲ್ಲಾ ಸರ್ಕಾರಿ ನೌಕರರು 2023-24 ನೇ ಆರ್ಥಿಕ ವರ್ಷದಲ್ಲಿ (ದಿನಾಂಕ:01-04-2023 ರಿಂದ 31-03-2024 ರವರೆಗೆ) ತಮ್ಮ ಆದಾಯಕ್ಕೆ ಮತ್ತು ಆಯ್ಕೆ ಮಾಡಿಕೊಂಡಿರುವ ತೆರಿಗೆ ವಿಧಾನಕ್ಕೆ ಅನುಗುಣವಾಗಿ ನಿಗದಿಪಡಿಸಿದ ದರದಂತೆ ಸರ್ಕಾರಕ್ಕೆ ಆದಾಯ ತೆರಿಗೆ ಪಾವತಿ ಮಾಡುವುದು ಕಾನೂನು ರೀತ್ಯ ಅವರವರ ವೈಯುಕ್ತಿಕ ಹೊಣೆಗಾರಿಕೆಯಾಗಿರುತ್ತದೆ.

5. ಆದಾಯ ತೆರಿಗೆ ಅಧಿನಿಯಮದ ನಿಯಮ 192(1)ರಂತೆ ಸಂಬಳ ತೆಗೆಯುವ ಹಾಗೂ ವಿತರಣೆ ಮಾಡುವ ಅಧಿಕಾರಿಯು ಆದಾಯ ತೆರಿಗೆ ಕಕ್ಷೆಯಡಿ ಬರುವ ಅಧಿಕಾರಿಗಳು/ನೌಕರರು ಸರ್ಕಾರಕ್ಕೆ ಪಾವತಿಸಬೇಕಾದ ಆದಾಯ ತೆರಿಗೆಯನ್ನು ವೇತನ ಆದಾಯದಿಂದ ಮೂಲದಲ್ಲಿಯೇ ಕಟಾಯಿಸಿ ಸರ್ಕಾರಕ್ಕೆ ಪಾವತಿ ಮಾಡುವುದು ಅವರ ಜವಾಬ್ದಾರಿಯಾಗಿರುತ್ತದೆ.

6. ಆದಾಯ ತೆರಿಗೆಯ ಕಕ್ಷೆಗೆ ಬರುವ ಎಲ್ಲಾ ಅಧಿಕಾರಿ ಹಾಗೂ ನೌಕರರು ಹಾಗೂ ಆದಾಯ ತೆರಿಗೆ ಫಾರಂ 16 ಅಪೇಕ್ಷಿಸುವ ಆದಾಯ ತೆರಿಗೆ ಪಾನ್ ಸಂಖ್ಯೆ ಹೊಂದಿರುವ ನೌಕರರು ಅವರ ಆದಾಯ ಎಷ್ಟೇ ಇದ್ದರೂ ಸಹಾ ಈ ಜ್ಞಾಪನಾ ಪತ್ರದೊಂದಿಗೆ ಲಗತ್ತಿಸಿರುವ ಅನುಬಂಧ I ಮತ್ತು II ರ ನಮೂನೆಯಲ್ಲಿ ವೇತನದ ಮಾಹಿತಿಗಳನ್ನು ಅವರ ವೇತನ ತೆಗೆಯುವ ಹಾಗು ವಿತರಿಸುವ ಅಧಿಕಾರಿಗಳಿಗೆ ದಿನಾಂಕ: 20–11–2023 ರೊಳಗೆ ಸಲ್ಲಿಸತಕ್ಕದ್ದು.

7. ಅಧಿಕಾರಿಗಳು/ನೌಕರರು ಈ ಪತ್ರಕ್ಕೆ ಲಗತ್ತಿಸಿರುವ ನಮೂನೆಯನ್ವಯ ಮಾಹಿತಿಯನ್ನು ಸಕಾಲಕ್ಕೆ ಒದಗಿಸದಿದ್ದಲ್ಲಿ ವೇತನ ಡ್ರಾ ಮಾಡಿ ವಿತರಣೆ ಮಾಡುವ ಅಧಿಕಾರಿಗಳು ಸದರಿ ನೌಕರರ ವೇತನ ಹಾಗೂ ಉಳಿತಾಯಗಳ ಬಗ್ಗೆ ಕಛೇರಿಯಲ್ಲಿ ಲಭ್ಯವಿರುವ ಮಾಹಿತಿಯನ್ವಯ ಅವರು ಪಾವತಿಸ ಬೇಕಾಗುವ ಆದಾಯ ತೆರಿಗೆ ಹಣವನ್ನು ಲೆಕ್ಕಾಚಾರ ಮಾಡಿ ಪ್ರತಿ ಮಾಹೆ ತೆರಿಗೆ ಪಾವತಿ ಕಂತುಗಳನ್ನು ಹಾಗೂ ಕೊನೇ ಕಂತನ್ನು ಫೆಬ್ರವರಿ ಮಾಹೆಯ ವೇತನದಲ್ಲಿ ಕಟಾಯಿಸಿ ಪೂರ್ಣವಾಗಿ ಸರ್ಕಾರಕ್ಕೆ ಪಾವತಿ ಮಾಡತಕ್ಕದ್ದು.

8. 2020–21ನೇ ಆರ್ಥಿಕ ವರ್ಷದಿಂದ ವರಮಾನ ತೆರಿಗೆ ಲೆಕ್ಕಾಚಾರದಲ್ಲಿ ಹಲವಾರು ಬದಲಾವಣೆಗಳನ್ನು ಮಾಡಲಾಗಿದ್ದು ವೇತನ ವಿತರಣಾಧಿಕಾರಿಗಳು ಈ ಬದಲಾವಣೆಗಳನ್ನು ಸರಿಯಾಗಿ ಅರ್ಥೈಸಿಕೊಂಡು ಆದಾಯ ತೆರಿಗೆ ಕಟಾವಣೆ ಹಾಗೂ ಎಲ್ಲಾ ನಿಗದಿತ ರಿಟರ್ನ್ಸ್‌ಗಳನ್ನು e-returns ಮೂಲಕ ಸಕಾಲದಲ್ಲಿ ಸಲ್ಲಿಸತಕ್ಕದ್ದು. e-returns ಸಲ್ಲಿಸಲು ವಿಳಂಬ ಮಾಡಿದಲ್ಲಿ, ದಂಡ ಇತ್ಯಾದಿಗಳನ್ನು ವಿಧಿಸಲು ಅವಕಾಶವಿದ್ದು, ಇದಕ್ಕೆ ಸಂಬಂಧಪಟ್ಟ ಬಟವಾಡ ಅಧಿಕಾರಿಗಳು ವೈಯಕ್ತಿಕವಾಗಿ ಹೊಣೆಗಾರರಾಗುತ್ತಾರೆ. ಆದುದರಿಂದ ಬಟವಾಡೆ ಅಧಿಕಾರಿಗಳು ಅನಾವಶ್ಯಕ ಕಾನೂನು ತೊಡಕುಗಳಿಗೆ ಅವಕಾಶ ಮಾಡಿ ಕೊಡಬಾರದೆಂದು ತಿಳಿಯಪಡಿಸಲಾಗಿದೆ.

9. ವೇತನ ಡ್ರಾ ಮಾಡಿ ವಿತರಣೆ ಮಾಡುವ ಅಧಿಕಾರಿಗಳು ಈ ಕೆಳಕಾಣಿಸಿದ ಅಂಶಗಳನ್ನು ಗಮನದಲ್ಲಿಟ್ಟುಕೊಳ್ಳತಕ್ಕದ್ದು.

   i. ಆದಾಯ ತೆರಿಗೆ ಕಕ್ಷೆಯಡಿ ಬರುವ ಎಲ್ಲಾ ಅಧಿಕಾರಿ / ಸಿಬ್ಬಂದಿ ವರ್ಗದವರು ಆದಾಯ ತೆರಿಗೆ ಇಲಾಖೆಯಿಂದ ಕಡ್ಡಾಯವಾಗಿ Permanent Account Number (ಪ್ಯಾನ್) ಪಡೆಯಲು ಸೂಚಿಸಬಹುದಾಗಿದೆ. ತಪ್ಪು PAN ಸಂಖ್ಯೆ ನೀಡುವುದು ಅಥವಾ PAN ಸಂಖ್ಯೆ ಹಾಕದೇ ಇರುವುದಕ್ಕೆ ರೂ.10,000/– ಗಳವರೆಗೆ ದಂಡ ವಿಧಿಸಬಹುದಾಗಿರುತ್ತದೆ. PAN ಸಂಖ್ಯೆ ಇಲ್ಲದೇ ನೌಕರರ ಆದಾಯ ತೆರಿಗೆ ಕಟಾಯಿಸಿದಲ್ಲಿ ವರ್ಷಾಂತ್ಯಕ್ಕೆ ಸಲ್ಲಿಸಲಾಗುವ TDS-e-returns ಅಂಗೀಕಾರಗೊಳ್ಳದೇ ಸಮಸ್ಯೆ ಉಂಟಾಗುತ್ತದೆ ಎಂಬ ಅಂಶವನ್ನು ಗಮನಕ್ಕೆ ತಂದಿದೆ.

   ii. ಆರ್ಥಿಕ ವರ್ಷದ ಯಾವುದೇ ದಿನಾಂಕದಂದು ಅಧಿಕಾರಿ/ಸಿಬ್ಬಂದಿಯವರ ವಯಸ್ಸು 60 ವರ್ಷ ಮೀರಿದಲ್ಲಿ ಅವರನ್ನು ಹಿರಿಯ ನಾಗರಿಕರು ಎಂದು ಪರಿಗಣಿಸುತ್ತಾ ಹಿರಿಯ ನಾಗರೀಕರ ಸ್ಲಾಬ್ ಪ್ರಕಾರ ಆದಾಯ ತೆರಿಗೆ ಲೆಕ್ಕಚಾರ ಮಾಡಬೇಕಾಗಿರುತ್ತದೆ.

   iii. ಆದಾಯ ತೆರಿಗೆಯನ್ನು ವೇತನದಿಂದ ಕಟಾಯಿಸುವ ಪ್ರತಿ ವೇತನ ವಿತರಣೆ ಅಧಿಕಾರಿ TDS returns ಗಳನ್ನು ಸಲ್ಲಿಸಲು ಪ್ರತ್ಯೇಕ TAN ಪಡೆದುಕೊಳ್ಳತಕ್ಕದ್ದು. TAN ಪಡೆಯದೇ ಇದ್ದಲ್ಲಿ ರೂ.10,000/– ಗಳ ದಂಡ ವಿಧಿಸಲು ಅವಕಾಶವಿರುತ್ತದೆ.

   iv. ಆದಾಯ ತೆರಿಗೆ ಕಟಾಯಿಸಲಾದ ನೌಕರರಿಗೆ ಫಾರಂ 16 ಅನ್ನು ನಿಗದಿತ ನಮೂನೆಯಲ್ಲಿ ದಿನಾಂಕ: 15–06–2024ರೊಳಗೆ ನೀಡತಕ್ಕದ್ದು. **Duplicate** ಫಾರಂಗಳನ್ನು ನೀಡತಕ್ಕದ್ದಲ್ಲ. ವರ್ಷದ ಮಧ್ಯದಲ್ಲಿ ಯಾವುದೇ ನೌಕರರು ವರ್ಗಾವಣೆಗೊಂಡಲ್ಲಿ ಮತ್ತು ಅಂತಹ ನೌಕರರ ಆದಾಯ ತೆರಿಗೆಯನ್ನು ಅವರ ವೇತನದಿಂದ ಕಡಿತ ಮಾಡಿದ್ದಲ್ಲಿ ಯಾವ ಬಟವಾಡೆ ಅಧಿಕಾರಿ ಕಡಿತ ಮಾಡಿರುತ್ತಾರೆಯೋ ಅವರು ಆ ನೌಕರನಿಗೆ ಆ ಅವಧಿಗೆ ನಮೂನೆ 16ರ ಪಾರ್ಟ್ ಎ ಅನ್ನು

ನೀಡುವುದು. ಅಲ್ಲದೇ ಹೀಗೆ ಕಟಾಯಿಸಲಾದ ತೆರಿಗೆ ಮಾಹಿತಿಯನ್ನು ಅವರ ನೂತನ ವೇತನ ತೆಗೆಯುವ ಹಾಗೂ ವಿತರಿಸುವ ಅಧಿಕಾರಿಗೂ ಕಳುಹಿಸುವುದು. ನೂತನ ವೇತನ ತೆಗೆಯುವ ಹಾಗೂ ವಿತರಿಸುವ ಅಧಿಕಾರಿಗಳು ಅವರ ವ್ಯಾಪ್ತಿಯಲ್ಲಿ ಕಟಾಯಿಸಲಾದ ತೆರಿಗೆ ಮಾಹಿತಿಯನ್ನು ನಮೂನೆ 16ರ ಪಾರ್ಟ್ ಎ ನಲ್ಲೂ ಮತ್ತು ನೌಕರರ ಹಿಂದಿನ ಬಟವಾಡೆ ಅಧಿಕಾರಿ ನೀಡಿದ ತೆರಿಗೆ ಮಾಹಿತಿ ಹಾಗೂ ತಮ್ಮ ವ್ಯಾಪ್ತಿಯಲ್ಲಿ ಕಟಾಯಿಸಿದ ತೆರಿಗೆ ಮಾಹಿತಿಯು ಒಳಗೊಂಡಂತೆ ಆ ವರ್ಷದಲ್ಲಿ ಕಟಾಯಿಸಲಾದ ಒಟ್ಟು ತೆರಿಗೆ ಮಾಹಿತಿಯನ್ನು Form 16 Part "B" ನಲ್ಲಿ ನೀಡುವುದು.

v. ಆದಾಯ ತೆರಿಗೆ ಮೊತ್ತವನ್ನು ಸಾಧ್ಯವಾದ ಮಟ್ಟಿಗೆ ನಿಖರವಾಗಿ ಲೆಕ್ಕಾಚಾರ ಮಾಡಿ ವೇತನದಿಂದ ಸಮ ಕಂತುಗಳನ್ನು ಕಟಾಯಿಸಲು ಕ್ರಮ ಕೈಗೊಳ್ಳಬಹುದಾಗಿದೆ. ನಂತರದಲ್ಲಿ ಚಲನ್ ಮೂಲಕ ಹಣ ಪಾವತಿಸುವುದನ್ನು ಆದಷ್ಟು ಮಟ್ಟಿಗೆ ತಡೆಗಟ್ಟುವುದು.

vi. ಆರ್ಥಿಕ ವರ್ಷದಲ್ಲಿ ಮಾಡಲಾದ ಒಟ್ಟಾರೆ TDS ಮಾಹಿತಿಯನ್ನು ಫಾರಂ 24,26,27ರಲ್ಲಿ e returns ಮೂಲಕ NSDL ಅಂಗೀಕೃತ ಸಂಸ್ಥೆಗಳ ಮೂಲಕ ದಿನಾಂಕ: 31-05-2024 ರೊಳಗೆ ಸಲ್ಲಿಸತಕ್ಕದ್ದು.

**vii. ಪ್ರತಿ ತ್ರೈಮಾಸಿಕದ ಅಂತ್ಯಕ್ಕೆ ಕಟಾಯಿಸಲಾಗುವ TDS ಮಾಹಿತಿಗಳನ್ನು e return ಮೂಲಕ NSDL ಅಂಗೀಕೃತ ಸಂಸ್ಥೆಗಳ ಮೂಲಕ ಸಲ್ಲಿಸತಕ್ಕದ್ದು.**

| ಕ್ರ. ಸಂ. | ವಿವರ | ರಿಟರ್ನ್ಸ್ ಸಲ್ಲಿಸುವ ಕೊನೆಯ ದಿನಾಂಕ |
|---|---|---|
| 01 | 30 ಜೂನ್‌ಗೆ ಅಂತಿಮಗೊಳ್ಳುವ ತ್ರೈಮಾಸಿಕ | 31.07.2023 |
| 02 | 30 ಸೆಪ್ಟೆಂಬರ್‌ಗೆ ಅಂತಿಮಗೊಳ್ಳುವ ತ್ರೈಮಾಸಿಕ | 31.10.2023 |
| 03 | 31 ಡಿಸೆಂಬರ್‌ಗೆ ಅಂತಿಮಗೊಳ್ಳುವ ತ್ರೈಮಾಸಿಕ | 31.01.2024 |
| 04 | 31 ಮಾರ್ಚ್‌ಗೆ ಕೊನೆಗೊಳ್ಳುವ ತ್ರೈಮಾಸಿಕ | 31.05.2024 |

**viii.** ಎಲ್ಲಾ ವೇತನ ಡ್ರಾ ಮಾಡುವ ಹಾಗೂ ವಿತರಿಸುವ ಅಧಿಕಾರಿಯವರು ಟಿ.ಡಿ.ಎಸ್ ತ್ರೈಮಾಸಿಕ ವರದಿಗಳನ್ನು ನಿಗದಿತ ದಿನಾಂಕಗಳೊಳಗಾಗಿ ನಿಖರವಾದ ಮತ್ತು ಸಂಪೂರ್ಣವಾದ ಮಾಹಿತಿಯನ್ನು ಎನ್.ಎಸ್.ಡಿ.ಎಲ್ ಅಂಗೀಕೃತ ಸಂಸ್ಥೆಗಳ ಮೂಲಕ ತಪ್ಪದೆ ರಿಟರ್ನ್ಸ್ ಸಲ್ಲಿಸಲು ಕಟ್ಟುನಿಟ್ಟಿನ ಕ್ರಮವಹಿಸಲು ಸೂಚಿಸಿದೆ. ಸೆಂಟ್ರಲ್ ಬೋರ್ಡ್ ಆಫ್ ಡೈರೆಕ್ಟ್ ಟ್ಯಾಕ್ಸಸ್, ಭಾರತ ಸರ್ಕಾರ, ಇಲಾಖೆಯಿಂದ ಕಾಲ ಕಾಲಕ್ಕೆ ನೀಡಲಾಗುವ ಸೂಚನೆಗಳನ್ನು ತಪ್ಪದೆ ಪಾಲಿಸಲು ಸೂಚಿಸಿದೆ.

ಸಹಕಾರ ಸಂಘಗಳ ಲೆಕ್ಕಪರಿಶೋಧನಾ
ನಿರ್ದೇಶಕರು

**ಪ್ರತಿಯನ್ನು:**

1. ಇಲಾಖೆಯ ಎಲ್ಲಾ ಜಿಲ್ಲೆಯ ಜಂಟಿ ನಿರ್ದೇಶಕರು/ಉಪ ನಿರ್ದೇಶಕರುಗಳಿಗೆ-ಸುತ್ತೋಲೆಯ ಅಂಶಗಳನ್ನು ನಿಮ್ಮ ವ್ಯಾಪ್ತಿಯಲ್ಲಿ ಬರುವ ಅಧೀನ ಕಛೇರಿ/ಅಧೀನ ಸಿಬ್ಬಂದಿಗಳ ಗಮನಕ್ಕೆ ತರುವುದು.
2. ಕೇಂದ್ರ ಕಛೇರಿಯ ಎಲ್ಲಾ ಅಧಿಕಾರಿಗಳಿಗೆ/ಆದಾಯ ತೆರಿಗೆ ವ್ಯಾಪ್ತಿಗೊಳಪಡುವ ನೌಕರರಿಗೆ – ದಿನಾಂಕ 20.11.2023 ರೊಳಗೆ ಪೂರ್ಣ ಮಾಹಿತಿಯನ್ನು ಹಾಗೂ ಅವರು ಪಾವತಿಸಬೇಕಾಗುವ ಆದಾಯ ತೆರಿಗೆಯ ಬಾಬ್ತು ಉಳಿದ ಮಾಹೆಯ ವೇತನದಿಂದ ಕಟಾಯಿಸಬಹುದಾದ ಕಂತಿನ ಮೊತ್ತವನ್ನು ಸಲ್ಲಿಸಲು ಸೂಚಿಸಿದೆ. ನಿಗಧಿತ ಅವಧಿಯಲ್ಲಿ ಮಾಹಿತಿ ನೀಡದಿದ್ದಲ್ಲಿ ಕಛೇರಿಯಲ್ಲಿ ಲಭ್ಯವಿರುವ ಮಾಹಿತಿಯನ್ವಯ ಆದಾಯ ತೆರಿಗೆ ಲೆಕ್ಕಾಚಾರ ಮಾಡಿ ನವೆಂಬರ್ 2020ರ ಮಾಹೆಯ ವೇತನದಿಂದ ಪ್ರಾರಂಭಿಸಿ ಕಟಾಯಿಸಲಾಗುವುದು.